# ಸಂಘದ ಜ್ಞಾಪಕ ಪತ್ರ

**ಸಂಸ್ಥೆಯ ಧ್ಯೆಯೋದ್ದೇಶಗಳು ಈ ಕೆಳಕಂಡಂತಿವೆ:**

ಅ) ಸಾಮಾನ್ಯ ಪ್ರವೇಶ ಪರೀಕ್ಷೆ ನಡೆಸುವುದು, ಪರೀಕ್ಷೆಯನ್ನು ಬಹುಆಯ್ಕೆ ಪ್ರಶ್ನೆ ಪತ್ರಿಕೆ ಮತ್ತು ಇತರೆ ಮಾದರಿಯಲ್ಲಿ ಪರೀಕ್ಷೆ ನಡೆಸಿ, ವೃತ್ತಿಪರ ಕೋರ್ಸುಗಳ ವಿದ್ಯಾರ್ಥಿಗಳಿಗೆ ಸೀಟು ಆಯ್ಕೆ ಪ್ರಕ್ರಿಯೆಯನ್ನು ವೈದ್ಯಕೀಯ/ದಂತವೈದ್ಯಕೀಯ ಇಂಜಿನಿಯರಿಂಗ್ ಹಾಗೂ ಕೃಷಿ ಸಂಬಂಧಿತ ಕೋರ್ಸುಗಳಿಗೆ ಮತ್ತು ಖಾಸಗಿ ಕಾಲೇಜುಗಳಲ್ಲಿ ಸರ್ಕಾರ ನಿಗಧಿಪಡಿಸಿರುವ ಸೀಟುಗಳನ್ನು ನಿಗಧಿಪಡಿಸಿರುವ ಶುಲ್ಕದಂತೆ ಸೀಟು ಹಂಚಿಕೆಯನ್ನು ಕರಾರಿನಂತೆ ಮಾಡುವುದು.

ಆ) ಬೇರೆ ಖಾಸಗಿ ಇತರೆ ಸಂಘ ಸಂಸ್ಥೆಗಳು ನೇಮಕಾತಿ ಬೇಡಿಕೆ ಸಲ್ಲಿಸಿದ್ದಲ್ಲಿ ಅದರಂತೆ ಪರೀಕ್ಷೆ ನಡೆಸುವುದು.

ಇ) ಸರ್ಕಾರವು ನಿರ್ಧರಿಸಿದಂತೆ ಕಾಲಕಾಲಕ್ಕೆ ಹೊರಡಿಸುವ ಸರ್ಕಾರಿ ಆದೇಶದಂತೆ ಬೇರೆ ಬೇರೆ ಪರೀಕ್ಷೆಗಳನ್ನು ನಡೆಸುವುದು.

ಈ) ಈ ಸಂಸ್ಥೆ/ಪ್ರಾಧಿಕಾರಕ್ಕೆ ವಹಿಸುವ ಪರೀಕ್ಷೆಗಳನ್ನು ಪಾರದರ್ಶಕವಾಗಿ ಹಾಗೂ ಅತ್ಯುತ್ತಮ ರೀತಿಯಲ್ಲಿ ಪರೀಕ್ಷೆಯನ್ನು ನಡೆಸುವುದು.